‘ಒಂದು ವೇಳೆ ನಾವು ನಾಳೆ ಬೇರೆಯಾಗಲು ಬಯಸಿದರೆ, ಈ ಮನೆ ಅಡ್ಡ ಬರುತ್ತೆ’, ಎಂದಿದ್ದ ರಿತಿಕ್.

‘ನಾವೇಕೆ ಬೇರೆಯಾಗಲು ಬಯಸುತ್ತೇವೆ?’

‘ಗೊತ್ತಿಲ್ಲ, ಆದ್ರೆ ಒಂದು ವೇಳೆ ಹೀಗಾದರೆ...’ ರಿತಿಕ್ ಅನ್ಯಮನಸ್ಕನಾಗಿ ಹೇಳಿದ್ದ.

‘ಬೇರೆಯಾಗೋದು ಅಷ್ಟು ಸುಲಭವಲ್ಲ. ಇನ್ನು ಭೌತಿಕ ವಸ್ತುಗಳು. ಇವು ಬೇರೆಯಾಗುವಾಗ ಮಹತ್ವವೆನಿಸುವುದಿಲ್ಲ’, ನಾನು ತರ್ಕಿಸಿದ್ದೆ.

‘ಈ ‘ಮನೆ’ ಬಂಧನವನ್ನು ಹೊರತುಪಡಿಸಿ ನಮಗ್ಯಾವುದೇ ಬಂಧನವಿಲ್ಲ; ನಾವು ಬೇರೆಯಾಗುವಾಗ ಈ ಮನೆಯನ್ನು ಒಡೆಯಬೇಕಾಗುವುದು’, ರಿತಿಕ್ ಈ ಹಿಂದಿನಂತೆ ಅನ್ಯಮನಸ್ಕನಾಗಿದ್ದ.

‘ಸರಿ! ನಾನು ನಾಳೆಯೇ ಹೋಗಿ, ಈ ಮನೆಯನ್ನು ನನ್ನ ಹೆಸರಿಗೆ ಮಾಡ್ತೀನಿ’, ನನಗೆ ಕೆಡುಕೆನಿಸಿತ್ತು. ನಾನಾಗ ಭಾವುಕಳಾಗಿದ್ದೆ.

‘ನಾನು ಹೀಗೇ ಸುಮ್ಮನೇ ಹೇಳಿದ್ದೆ’, ರಿತಿಕ್ ಪರಿಸ್ಥಿತಿಯನ್ನು ಸಂಭಾಳಿಸಿದ್ದ.



ಹದಿನಾಲ್ಕು ಲಕ್ಷ ರೂಪಾಯಿಗಳ ಈ ಭವ್ಯ ಮನೆಯನ್ನು ಖರೀದಿಸುವಲ್ಲಿ ಏಳು ಲಕ್ಷ ರೂಪಾಯಿಗಳು ನನ್ನದಾಗಿದ್ದವು, ಉಳಿದ ಏಳು ಲಕ್ಷ ರೂಪಾಯಿಗಳು ರಿತಿಕ್‌ನದ್ದಾಗಿತ್ತು; ಈ ಬಗ್ಗೆ ರಿತಿಕ್ ವ್ಯಗ್ರನಾಗಿರಬೇಕೆಂದು ನನಗೆ ಅನ್ನಿಸಿತು. ಮನೆ ಹೌಸಿಂಗ್ ಬೋರ್ಡಿಗೆ ಸೇರಿದ್ದಾಗ್ಯೂ ಮನೆಯನ್ನು ಮೊದಲು ಖರೀದಿಸಿದವನು ಅದನ್ನು ತನ್ನಿಚ್ಛೆಯಂತೆ ಮನೆಗೆ ಬೃಹತ್ ಆಕಾರವನ್ನು ಕೊಟ್ಟಿದ್ದ. ನಾನು ಅಥವಾ ರಿತಿಕ್ ಬೇರೆ ಬೇರೆಯಾಗಿದ್ದರೆ, ಈ ಮನೆಯನ್ನು ಖರೀದಿಸುವ ಕನಸನ್ನು ಸಹ ನಾವು ಕಾಣಲು ಸಾಧ್ಯವಿರಲಿಲ್ಲ. ನಮ್ಮ ಆರ್ಥಿಕ ಮಿತಿಯಲ್ಲಿ ಹದಿನಾಲ್ಕು ಲಕ್ಷ ರೂಪಾಯಿಗಳನ್ನು ಕೊಟ್ಟು ಮನೆಯನ್ನು ಖರೀದಿಸುವುದು ಸಂಭವವಿರಲಿಲ್ಲ. ನಾವು ಜೊತೆಯಲ್ಲಿರುತ್ತಿದ್ದೆವು, ಸ್ವತಂತ್ರವಾಗಿ ಖರ್ಚು ಮಾಡುತ್ತಿದ್ದೆವು; ಹೀಗಾಗಿ ಈ ಮನೆಯನ್ನು ಖರೀದಿಸುವುದು ಸಾಧ್ಯವಾಗಿತ್ತು. ಒಂದು ವೇಳೆ ನಾನು ರಿತಿಕ್‌ನ ಹೆಂಡತಿಯಾಗಿ, ನಮ್ಮ ಕುಟುಂಬವನ್ನು ಹೆಚ್ಚಿಸಿಕೊಂಡಿದ್ದರೆ, ಬಹುಶಃ ನಾನು ರಿತಿಕ್‌ಗೆ ಏಳೆಂಟು ಲಕ್ಷ ರೂಪಾಯಿಗಳ ಮನೆಯನ್ನು ಖರೀದಿಸಲು ಹೇಳುತ್ತಿದ್ದೆ, ಅಂಥ ಪರಿಸ್ಥಿತಿಯಲ್ಲಿ ಕುಟುಂಬ ಮತ್ತು ಮಕ್ಕಳ ಆರ್ಥಿಕ ಭವಿಷ್ಯವನ್ನು ನೋಡಬೇಕಾಗುತ್ತಿತ್ತು ಎಂದು ನನಗೆ ಅನೇಕ ಬಾರಿ ಅನ್ನಿಸಿತು.

### ಕರವಾಚೌಥ್

ನಾವು ನಮ್ಮ ಹೊಸ ಮನೆಯಲ್ಲಿ ಪ್ರವೇಶ ಮಾಡಿದೆವು. ನಾನು ಗೃಹಪ್ರವೇಶದ ಪೂಜೆ ಮಾಡಿಸಲು ಬಯಸುತ್ತಿದ್ದೆ; ಮನೆಯ ದ್ವಾರದಲ್ಲಿ ತೋರಣ ಕಟ್ಟಿಸಿ, ನನ್ನ ಪರಿಚಿತರು ಮತ್ತು ರಿತಿಕ್‌ನ ಪರಿಚಿತರನ್ನು ಆಹ್ವಾನಿಸಲು ಬಯಸುತ್ತಿದ್ದೆ. ಆದರೆ ಹೀಗೆ ಮಾಡದಾದೆ.

‘ವ್ಯರ್ಥ ಗುಂಪು ಸೇರಿಸುವುದರಿಂದ ಏನು ಲಾಭ? ಈ ಮನೆಯಲ್ಲಿ ಒಮ್ಮೆ ಗೃಹಪ್ರವೇಶವನ್ನು ಮಾಡಲಾಗಿದೆ, ಆಗ ಇಲ್ಲಿ ಪೂಜೆಪುನಸ್ಕಾರಗಳನ್ನು ಸಹ ಮಾಡಿಸಿರಬೇಕು, ಆದರೂ ನೀನು ಬಯಸಿದರೆ, ನೀನೇ ಪೂಜೆ ಮಾಡು’, ರಿತಿಕ್ ವಿರೋಧಿಸುತ್ತಾ ಹೇಳಿದ್ದ.

‘ಇಂಥ ಪೂಜೆಯನ್ನು ನಾವೇ ಮಾಡಬಾರದು, ಪೂಜಾರಿಗಳನ್ನು ಕರೆಸಬೇಕಾಗುತ್ತೆ’ ಎಂದಿದ್ದೆ.

‘ಅದಕ್ಕೇ ನಾನು ಪೂಜೆ ಮಾಡಿಸಲು ಬಯಸಲ್ಲ. ಪೂಜಾರಿಗಳು ಬರ್ತಾರೆ, ಅವರು ಸಹ ‘ಇವರು ನಿಮ್ಮ ಪತ್ನಿಯೇ?’ ಅಂತ ಅನೇಕ ಪ್ರಶ್ನೆಗಳನ್ನು ಕೇಳ್ತಾರೆ. ನನಗೆ ಇಂಥ ಪೂಜೆ ಬೇಡ’ ರಿತಿಕ್ ರೇಗಿದ್ದ.

‘ಸರಿ, ಮಾಡಿಸೋದು ಬೇಡ. ಆದ್ರೆ ನಾವು ಒಂದು ಸಣ್ಣ ಪಾರ್ಟಿ ಕೊಟ್ಟರೆ? ನಾವು ನಮ್ಮ ಮನೆಯನ್ನು ಸೆಲೆಬ್ರೇಟ್ ಮಾಡಬೇಕಲ್ವ’ ನಾನು ತರ್ಕಿಸಿದೆ.

‘ಆಗಲಿ. ಪಾರ್ಟಿಗೆ ನಮ್ಮ ರಿಲೇಶನ್‌ಶಿಪ್ ಬಗ್ಗೆ ಗೊತ್ತಿದ್ದವರಷ್ಟೇ ಬರ್ತಾರೆ. ಅವರು, ‘ಇವಳು ನಿನಗೇನಾಗಬೇಕು? ಅಂತ ಕೇಳಲ್ಲ’, ರಿತಿಕ್ ಶಾಂತನಾಗಿ ಹೇಳಿದ.

‘ನನಗೂ ‘ಇವರು ನಿಮಗೇನಾಗಬೇಕು?’ ಅಂತ ಕೇಳ್ತಾರೆ.’

ಕಡೆಗೆ ನಮ್ಮ ‘ಗೃಹಪ್ರವೇಶ’ದ ಪಾರ್ಟಿಗೆ ಕರೆಯಲಾಗುವ ಅತಿಥಿಗಳ ಒಂದು ಸಣ್ಣ ಲಿಸ್ಟ್ ಸಿದ್ಧವಾಯಿತು. ಈ ಸಮಾರಂಭಕ್ಕೆ ನನ್ನ ತಾಯಿ ಆಹ್ವಾನಿತರಾಗಿರಲಿಲ್ಲ, ರಿತಿಕ್‌ನ ಕುಟುಂಬದವರು ಸಹ ಆಹ್ವಾನಿತರಾಗಿರಲಿಲ್ಲ. ನಾವು ಯಾವುದೇ ಅಪ್ರಿಯ ಪರಿಸ್ಥಿತಿಗಳಿಂದ ಪಾರಾಗಲು ಬಯಸುತ್ತಿದ್ದೆವು. ಅವರು ಬಂದರೆ ನಮಗೆ ಉಪದೇಶವನ್ನೇ ಕೊಡುತ್ತಿದ್ದರು.

ನನ್ನ ಕಚೇರಿಯ ಸುಮಾರಾಗಿ ಎಲ್ಲಾ ಸಿಬ್ಬಂದಿಯನ್ನು ಹಾಗೂ ರಿತಿಕ್ ಕಚೇರಿಯ ಅವನ ಆಪ್ತ ಮಿತ್ರರನ್ನು ಅತಿಥಿಗಳ ಲಿಸ್ಟ್‌ನಲ್ಲಿ ಸೇರಿಸಲಾಗಿತ್ತು. ಬಹುರಾಷ್ಟ್ರೀಯ ಕಂಪನಿ ಮತ್ತು ಸರಕಾರಿ ನೌಕರಿಯಲ್ಲಿ ಇದೇ ವ್ಯತ್ಯಾಸವಿತ್ತು. ನಮ್ಮ ಕಚೇರಿಯ ಎಲ್ಲಾ ಸಿಬ್ಬಂದಿ ಒಂದು ಪರಿವಾರದಂತಿದ್ದರು, ಇಲ್ಲಿ ಜಗಳವೂ ಇತ್ತು, ಪ್ರೀತಿಯೂ ಇತ್ತು; ಆದರೆ ರಿತಿಕ್ ಕಚೇರಿಯ ಸಿಬ್ಬಂದಿ ನಡುವೆ ಔಪಚಾರಿಕವಾದ ಪ್ರೀತಿ ಹೆಚ್ಚಿದ್ದು, ಆತ್ಮೀಯತೆ ಕಡಿಮೆಯಿತ್ತು. ಮಿತ್ರರ ಗುಂಪಿನಲ್ಲಿ ನಾಲ್ಕು ನಾಲ್ಕು, ಆರಾರು ಜನರಿದ್ದರು. ಅವರ ಕಚೇರಿಯಲ್ಲಿ ‘ವರ್ಕ್ ಕಲ್ಚರ್’ ಇತ್ತು; ಇದು ನನ್ನ ಕಚೇರಿಯಲ್ಲಿರಲಿಲ್ಲ. ಈ ಕಚೇರಿಯಲ್ಲಿ ಅವರನ್ನು ನೌಕರಿಯಿಂದ ತೆಗೆದು ಹಾಕುವ ಭಯವಿರಲಿಲ್ಲ. ಭಯ ಮನುಷ್ಯನಿಗೆ ಉತ್ತಮ ಕಾರ್ಯಗಳನ್ನು ಮಾಡಿಸುತ್ತದೆ; ಭಯಮುಕ್ತ ಸಹ ಅನೇಕ ಬಾರಿ ಮನುಷ್ಯನನ್ನು ಅವಿಧೇಯನನ್ನಾಗಿ ಮಾಡುತ್ತದೆ. ನನ್ನ ಕಚೇರಿಯಲ್ಲಿ ಇಂಥ ಅವಿಧೇಯರಿಗೆ ಕೊರತೆಯಿರಲಿಲ್ಲ. ಇಂಥವರು ಮೊದಲ ದರ್ಜೆಯ ಸೋಮಾರಿಗಳು ಮತ್ತು ಮೈಗಳ್ಳರಾಗಿದ್ದರು. ಅಧಿಕಾರಿಯೊಬ್ಬರು ಕಟ್ಟುನಿಟ್ಟಾಗಿ ಕಾನೂನು ನಿಯಮಗಳನ್ನು ಹೇಳಿದರೆ, ಅವರ ವಿರುದ್ಧ ‘ನೇತಾಗಿರಿ ಜಿಂದಾಬಾದ್, ಗೇಟ್ ಮೀಟಿಂಗ್, ವರ್ಕ್ ಸ್ಟಾಪ್ ಮತ್ತು ವಿರೋಧ ಪ್ರದರ್ಶನಗಳು’ ನಡೆಯುತ್ತವೆ. ಆದರೂ ನಮ್ಮ ಕಚೇರಿಯ ಸಿಬ್ಬಂದಿಯಲ್ಲಿ ಒಬ್ಬರು ಇನ್ನೊಬ್ಬರ ಮನೆಗೆ ಬಂದುಹೋಗುವ ಪದ್ಧತಿಯಿದೆ. ನನ್ನ ಆಹ್ವಾನದ ಮೇರೆಗೆ ಸುಮಾರಾಗಿ ಎಲ್ಲರೂ ಬಂದರು. ಮೊದಲನೆಯದಾಗಿ ಮನೆಯನ್ನು ನೋಡುವ ಕುತೂಹಲವಾದರೆ, ಎರಡನೆಯದಾಗಿ ಆತ್ಮೀಯತೆಯ ಪರಂಪರೆಯನ್ನು ಕಾಯ್ದಿಟ್ಟುಕೊಳ್ಳುವುದಾಗಿತ್ತು.

ಪಾರ್ಟಿ ಚೆನ್ನಾಗಿಯೇ ನಡೆಯಿತು. ತನ್ನ ಸ್ನೇಹಿತರು ‘ಡ್ರಿಂಕ್ಸ್’ ಇಚ್ಛೆಯನ್ನು ವ್ಯಕ್ತಪಡಿಸಿದ್ದರು ಎಂದು ರಿತಿಕ್ ಹೇಳಿದ್ದ. ಆದರೆ ರಿತಿಕ್ ನನ್ನೆಡೆಗೆ ಬೆರಳು ಮಾಡಿ ಡ್ರಿಂಕ್ಸ್ ನಿಷೇಧಿಸಿದ.

‘ಒಂದು ವೇಳೆ ಹೆಚ್ಚು ಆಗ್ರಹಿಸಿದರೆ, ಅವರನ್ನು ಇನ್ನೊಂದು ದಿನ ಬಾರಿಗೆ ಕರೆದುಕೊಂಡು ಹೋಗ್ತೀನಿ’ ಎಂದು ರಿತಿಕ್ ಹೇಳಿದ್ದ. ಅವನ ಈ ಮಾತು ನನಗೆ ಹಿಡಿಸಿತ್ತು. ಅವನು ಒಮ್ಮೊಮ್ಮೆ ನನಗೂ ಪ್ರೇರೇಪಿಸುತ್ತಿದ್ದ.

ಪಾರ್ಟಿಯಲ್ಲಿ...

‘ನೀನು ನನಗೆ ಕಂಪನಿ ಕೊಡಲು ಬೀರ್ ಅಥವಾ ಜಿನ್ ತಗೋಬಹುದು, ಈ ಎರಡೂ ಲೇಡೀಸ್ ಡ್ರಿಂಕ್ಸ್‌ಗಳು. ಈಚೆಗೆ ಮಹಿಳೆಯರು ಬಹಿರಂಗವಾಗಿ ಮದ್ಯವನ್ನು ಸೇವಿಸುತ್ತಾರೆ’ ಎನ್ನುತ್ತಿದ್ದ ರಿತಿಕ್.

‘ಡ್ರಿಂಕ್ಸ್‌ನಲ್ಲೂ ಮಹಿಳೆ ಮತ್ತು ಪುರುಷರ ಡ್ರಿಂಕ್ಸ್ ಅಂತ ವ್ಯತ್ಯಾಸವಿರುತ್ತೆ? ವಾಹ್’ ನಾನು ತಮಾಷೆ ಮಾಡಿದೆ.

‘ಹೌದು, ಈ ಎರಡೂ ಡ್ರಿಂಕ್ಸ್ ತೀವ್ರವಾಗಿರುವುದಿಲ್ಲ. ಸಾಫ್ಟ್ ಇರುತ್ತವೆ. ಯೂ ಶುಡ್ ಟ್ರೈ’